# ಮಗುವಿನ ಮಾತು

(25ನೇ ಪುಟದಿಂದ)

ಆಲಿಷಾಳ ಹಾಗೆಯೇ ಅಲ್ಲಿ ಇನ್ನೊಂದು ಮಗುವೂ ಶ್ರವಣ ತರಬೇತಿಗೆ ಬರುತ್ತಿತ್ತು. ಅಲಿಷಾಳಷ್ಟೇ ವಯಸ್ಸು. ಆದರೆ ಆ ಮಗು ಶಬ್ದಗಳಿಗೆ ಸೂಕ್ತ ಪ್ರತಿಕ್ರಿಯೆ ನೀಡುತ್ತಿರಲಿಲ್ಲಡಲಿಲ್ಲ. ಆ ಮಗುವಿನ ತಾಯಿ ಅಲಿಷಾಳ ತಾಯಿಯೊಡನೆ ದುಃಖ ತೋಡಿಕೊಂಡಳು. ಇಬ್ಬರೂ ಸೇರಿ ಮತ್ತೊಮ್ಮೆ ಶ್ರವಣ ಶಾಸ್ತ್ರಜ್ಞರನ್ನು ವಿಚಾರಿಸಿದಾಗ ಅವರು ಮತ್ತೆ ಯಂತ್ರ ಅಳವಡಿಸಿ ಪರೀಕ್ಷಿಸಿದರು. ಆದರೆ ಆ ಯಂತ್ರವೂ ಮಗುವಿಗೆ ಹೆಚ್ಚಿನ ಉಪಯೋಗವಾಗುತ್ತಿಲ್ಲ. 'ನೀವು ಕಾಕ್ಲಿಯರ್ ಇಂಪ್ಲಾಂಟ್ ಮಾಡಿಸುವುದು ಸೂಕ್ತ. ಇದರಿಂದ ಶಬ್ದದ ಅಲೆಗಳು ನೇರವಾಗಿ ಕಾಕ್ಲಿಯಾಗೆ ತಲುಪುತ್ತವೆ. ಮಗು ಚೆನ್ನಾಗಿ ಕೇಳಿಸಿಕೊಳ್ಳುತ್ತದೆ. ಆದರೆ ಇದು ಒಂದು ಶಸ್ತ್ರಚಿಕಿತ್ಸೆ ಮೂಲಕ ಮಾಡುವಂತಹದ್ದು. ಅದಕ್ಕೆ ಮಗುವಿನ ಆರೋಗ್ಯ, ದೇಹಸ್ಥಿತಿ ಸ್ಪಂದಿಸಲು ಸೂಕ್ತವಾಗಿದೆಯೇ ಎಂದು ಮೊದಲು ಪರೀಕ್ಷಿಸಬೇಕು' ಎಂದರು ವೈದ್ಯರು.

ಆಲಿಷಾಳ ತಾಯಿ ಕೂಡಾ ತನ್ನ ಮಗುವಿಗೆ ಈ ಶಸ್ತ್ರಚಿಕಿತ್ಸೆ ಮಾಡಲು ಉತ್ಸುಕಳಾಗಿದ್ದಳು. ಆದರೆ ವೈದ್ಯರು ಒಪ್ಪಲಿಲ್ಲ. ಯಾವ ಮಗುವಿಗೆ ಶ್ರವಣ ಯಂತ್ರಗಳಿಂದ ಲಾಭ ಪಡೆಯಲಾಗುವುದಿಲ್ಲವೋ ಆ ಮಗುವಿಗೆ ಮಾತ್ರ ಈ ಶಸ್ತ್ರಚಿಕಿತ್ಸೆಯ ಅಗತ್ಯವಿದೆ. ಅಲಿಷಾ ಯಂತ್ರದ ಸಹಾಯದಿಂದ ಚೆನ್ನಾಗಿ ಕೇಳಿಸಿಕೊಳ್ಳುತ್ತಿದ್ದಾಳೆ. ಆಕೆಗೆ ತರಬೇತಿಯೇ ಸಾಕು.

ಅಂದ ಹಾಗೆ, ಕಾಕ್ಲಿಯಾರ್ ಇಂಪ್ಲಾಂಟ್ ಮಾಡಿಸಿದ ಮಾತ್ರಕ್ಕೆ ಇತರ ತರಬೇತಿಗಳ ಅಗತ್ಯವಿಲ್ಲ ಎಂದಲ್ಲ. ಶಸ್ತ್ರಚಿಕಿತ್ಸೆಯ ನಂತರವೂ ಮಗುವಿಗೆ ತರಬೇತಿಯ ಅವಶ್ಯಕತೆ ಇದೆ. ಕಾಕ್ಲಿಯಾರ್ ಇಂಪ್ಲಾಂಟ್ ಗೆ ತುಂಬ ಹಣ ಖರ್ಚಾಗುತ್ತದೆ. ಕೆಲವು ಲಕ್ಷಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಇದಕ್ಕೆ ಸರ್ಕಾರದಿಂದ ಸಹಾಯಧನವೂ ಸಿಗುತ್ತದೆ.

ನಮ್ಮ ಸಂಸ್ಥೆಗೆ ಚಿಕಿತ್ಸೆಗೆ ಸೇರಿದ ಮಗುವಿಗೆ ಕುಟುಂಬದ ಎಲ್ಲ ಸದಸ್ಯರೂ ಬೆಂಬಲ ನೀಡಿದರೆ ತರಬೇತಿ ಸುಲಭ. ಆದರೆ ಬಹಳ ಸಲ ಹಾಗೆ ಆಗುವುದಿಲ್ಲ. ಆಲಿಷಾಳ ಪ್ರಕರಣವನ್ನೇ ತೆಗೆದುಕೊಳ್ಳಿ. ಅಲಿಷಾಳಿಗೆ ಊಟ ಮಾಡಿಸಿ ಮಲಗಿಸಿದ ಆಕೆಯ ತಾಯಿ ಕುಟುಂಬದ ಯೋಗಕ್ಷೇಮ ವಿಚಾರಿಸಲು ಗಂಡನಿಗೆ ಕರೆ ಮಾಡಿದಳು. ಅತ್ತಲಿಂದ ಅತ್ತೆಯ ಜೋರು ಧ್ವನಿ ಕೇಳಿತು. 'ಹೋಗಿ 3 ತಿಂಗಳಾಯಿತು, ಆ ಮಗು ಒಂದೂ ಮಾತಾಡಿಲ್ಲ, ಏನಿಲ್ಲ. ಇಲ್ಲಿ ಮನೆಕೆಲಸ ಮಾಡಬೇಕಲ್ಲ ಅಂತ ನಿನ್ನ ಹೆಂಡ್ತಿ ಆ ಮಗೀನಾ ನೆಪ ಮಾಡ್ಕೊಂಡು ಸಿಟೀಲಿ ಶೋಕಿ ಮಾಡ್ತಿದಾಳೆ. ನಾನು ಇಲ್ಲಿ ಮನೆ ಕೆಲ್ಸ ಎಲ್ಲ ಮಾಡ್ಕೊಂಡು ನಿಮ್ಗಳ ಚಾಕರಿ ಮಾಡ್ಬೇಕು, ಅದೇನು ಕರ್ಮ ನಂದು...' ಎನ್ನುವ ಜೋರು ಧ್ವನಿ ಫೋನ್‌ನಲ್ಲಿ ಕೇಳಿಸುತ್ತಿತ್ತು. ಆದರೆ ಆಕೆಯ ಗಂಡ ಬಹಳ ತಾಳ್ಮೆಯ ಮನುಷ್ಯ. 'ಹೆದರಬೇಡ, ಅಮ್ಮನಿಗೆ ನಾ ಹೇಳ್ತೀನಿ. ನೀನು ನಿನ್ನ ಕೆಲಸ ಮಾಡು. ಇಲ್ಲಿ ಏನೂ ಸಮಸ್ಯೆ ಇಲ್ಲ. ನಿನಗೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಲು ಓಡಾಡ್ತಾ ಇದ್ದೀನಿ. ಹಣ ತಗೊಂಡು ಮುಂದಿನ ವಾರ ಬರ್ತೀನಿ' ಎಂದು ಸಮಾಧಾನ ಮಾಡಿದ.

ಮಗುವಿನ ಚಿಕಿತ್ಸೆಗೆ ನೆರವಾಗುವ ತಾಯಿಗೆ ಸಾಕಷ್ಟು ಮಾನಸಿಕ ದೃಢತೆ ಇರಬೇಕು. ಎಲ್ಲವನ್ನೂ ಸಹನೆಯಿಂದ ಎದುರಿಸುವ ಮನೋಭಾವ ಬೆಳೆಸಬೇಕು. ಏಕೆಂದರೆ ರಾತ್ರಿ ಹಗಲಾಗುವುದರ ಒಳಗೆ ಫಲ ಸಿಗುವ ಚಿಕಿತ್ಸೆ ಅಲ್ಲ. ಸಾಮಾನ್ಯವಾಗಿ ಮನೆಯಲ್ಲಿ ಅತ್ತೆ, ಮಾವ ಸಂಬಂಧಿಕರ ಕಡೆಯಿಂದ ಹೀಗೆ ಕುತ್ಸಿತ ಮಾತುಗಳಿಗೆ ಗುರಿಯಾಗುವ ಅಮ್ಮಂದಿರು ತಮ್ಮ ಸಿಟ್ಟನ್ನು ಮಕ್ಕಳ ಮೇಲೆ ತೀರಿಸಲು ಮಕ್ಕಳಿಗೆ ಹೊಡೆದು ಕಲಿಸುವುದೂ ಇದೆ. ನಿಜಕ್ಕೂ ಇಂತಹ ಸ್ಥಿತಿಯನ್ನು ಸಮಚಿತ್ತದಿಂದ ಎದುರಿಸಬೇಕು.

ಮಾರನೆಯ ದಿನ ಆಲಿಷಾಗೆ ತರಬೇತಿಯಲ್ಲಿ ಮಗುವಿನ ಮಾತು ಮತ್ತು ಭಾಷೆ ಕಲಿಕೆಗೆ ಹಲವು ತಂತ್ರಗಳನ್ನು ಹೇಳಿಕೊಡಲಾಯಿತು. ಮನೆಗೆ ಬಂದು ಆ ತಂತ್ರಗಳನ್ನು ಬಳಸಿ ತಾಯಿ ಮಗುವಿಗೆ ಪಾಠ ಶುರು ಮಾಡಿದಳು. ಹೀಗೆ ಪ್ರತಿದಿನ ಮಗುವಿಗೆ ಶ್ರವಣ ತರಬೇತಿ, ವಾಕ್ ಭಾಷೆ ತರಬೇತಿ, ಪ್ರಿ—ಸ್ಕೂಲ್ ತರಬೇತಿ ನಿರಂತರವಾಗಿ ಸಾಗಿತು. ಪ್ರಿ—ಸ್ಕೂಲ್‌ನಲ್ಲಿ ಅನುಭವೀ ಪೋಷಕರು ಸಾಧನೆ ಮಾಡಿದ ತಮ್ಮ ಮಕ್ಕಳ ಜೊತೆಗೆ ಬರುವುದಿದೆ. ತಮ್ಮ ಮಕ್ಕಳಿಗೆ ಮಾತು ಕಲಿಸಲು ತಾವು ಪಟ್ಟ ಕಷ್ಟಗಳನ್ನು ವಿವರಿಸಿ, ಈಗ ಹೇಗೆ ತಮ್ಮ ಮಗು ಚೆನ್ನಾಗಿ ಇತರ ಹುಡುಗರ ಜತೆ ಸೇರಿ ಪಳಗಿದೆ ಎನ್ನುವುದನ್ನು ಅವರು ವಿವರಿಸಿ

